ನಿ-330 ಶ್ರೀ 88

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ರವಿ ರವರು ನಿಯಮ-330 ರಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಸಹಕಾರ ಸಚಿವರ ಉತ್ತರ.**

**ವಿಷಯ: ಯಶವಂತಪುರ ಎಪಿಎಂಸಿ ಮಾರುಕಟ್ಟೆಯ ಒತ್ತಡವನ್ನು ಕಡಿಮೆ ಮಾಡಿ, ಈ ಮಾರುಕಟ್ಟೆಗೆ ದಿನನಿತ್ಯ ಸರಕು ಸಾಗಣೆ ಮಾಡಲು ಬರುವ ವಾಹನಗಳ ದಟ್ಟಣೆಯಿಂದ (ಸುಮಾರು 4000 ವಾಹನಗಳು) ಮತ್ತು ಗ್ರಾಹಕರ ವಾಹನಗಳಿಂದ ಸಾರ್ವಜನಿಕರಿಗೆ ಆಗುತ್ತಿರುವ ಕಿರಿಕಿರಿಯನ್ನು ತಪ್ಪಿಸಲು ಹಾಗೂ ರೈತರು ಮತ್ತು ವರ್ತಕರಿಗೆ ಅನುಕೂಲವಾಗುವಂತೆ ಬೆಂಗಳೂರು ಹೊರವಲಯದಲ್ಲಿ ಸುಮಾರು 88 ಎಕರೆ ವಿಸ್ತೀರ್ಣದಲ್ಲಿ 400 ರಿಂದ 500 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ದಾಸನಪುರ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸದೆ ಸರ್ಕಾರದ ಯೋಜನೆಯು ನಿಷ್ಪ್ರಯೋಜನವಾಗುತ್ತಿರುವ ಕುರಿತು.**

*******

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ಮುಖ್ಯ ಮಾರುಕಟ್ಟೆ ಪ್ರಾಂಗಣ ಯಶವಂತಪುರಕ್ಕೆ ಈರುಳ್ಳಿ, ಆಲೂಗಡ್ಡೆಯನ್ನು ಮಾರಾಟಕ್ಕೆಂದು ತರುವ ರೈತರಿಗೆ ವಾಹನ ದಟ್ಟಣೆಯಿಂದಾಗುವ ತೊಂದರೆಯನ್ನು ತಪ್ಪಿಸುವ ಸಲುವಾಗಿ ಸಮಿತಿಯು ಈರುಳ್ಳಿ/ಆಲೂಗಡ್ಡೆ ವಹಿವಾಟಿಗಾಗಿ ಪ್ರತ್ಯೇಕವಾದ ಮಾರುಕಟ್ಟೆಯನ್ನು ಸ್ಥಾಪಿಸಲು ಉದ್ದೇಶಿಸಿ ದಿನಾಂಕ:17.04.2008 ರಲ್ಲಿ 67.25 ಎಕರೆ ಸರ್ಕಾರಿ ಜಮೀನನ್ನು ರೂ.21.47 ಕೋಟಿ ಮೊತ್ತವನ್ನು ಪಾವತಿಸಿ ಸಮಿತಿಯ ವಶಕ್ಕೆ ಪಡೆಯಲಾಗಿದ್ದು, ದಿನಾಂಕ:07.10.2009 ರಂದು ದಾಸನಪುರ ಉಪ ಮಾರುಕಟ್ಟೆ ಎಂದು ಘೋಷಿಸಲಾಗಿದೆ. ಪ್ರಸ್ತುತ ಈ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿರುತ್ತದೆ.

ಸದರಿ ಉಪ ಮಾರುಕಟ್ಟೆಯನ್ನು ಎ, ಬಿ, ಸಿ, ಡಿ ಮತ್ತು ಇ ಬ್ಲಾಕ್‌ಗಳಾಗಿ ವಿಂಗಡಿಸಲಾಗಿದ್ದು, ಎ ಮತ್ತು ಬಿ ಬ್ಲಾಕ್‌ಗಳಲ್ಲಿ ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪನ್ನಗಳ ವಹಿವಾಟಿಗೆ ಅವಕಾಶವಾಗುವಂತೆ ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಲಾಗಿರುತ್ತದೆ. ಇವು 212 ಅಂಗಡಿ-ವ-ಮಳಿಗೆಗಳು, 28 ಚಿಕ್ಕ ಮಳಿಗೆಗಳು ಹಾಗೂ 100 ಮೆಟ್ರಿಕ್ ಟನ್ ಸಾಮರ್ಥ್ಯದ 02 ಸಂಖ್ಯೆ ಗೋದಾಮುಗಳು, 60 ಮೆಟ್ರಿಕ್ ಟನ್ ಸಾಮರ್ಥ್ಯದ 02 ಸಂಖ್ಯೆ ವೇಬ್ರಿಡ್ಜ್, ಉಪಹಾರ ಗೃಹ, ಎಸ್.ಟಿ.ಪಿ. ಘಟಕಗಳು, ಘನತ್ಯಾಜ್ಯ ನಿರ್ವಹಣಾ ಘಟಕ, ತನಿಖಾ ಠಾಣೆಗಳು, ಶುದ್ಧ ಕುಡಿಯುವ ನೀರಿನ ಘಟಕಗಳು, ಸಾರ್ವಜನಿಕ ಶೌಚಾಲಯಗಳು ಹಾಗೂ ಯೂರಿನಲ್ ಬ್ಲಾಕ್‌ಗಳು, ಕೊಳವೆ ಬಾವಿ, ಹಾಗೂ ಓವರ್ ಹೆಡ್ ಟ್ಯಾಂಕ್, ವಿದ್ಯುತ್ ಸೌಲಭ್ಯ, ಮುಚ್ಚು ಹರಾಜು ಕಟ್ಟೆಗಳು ಹಾಗೂ ಸುಸಜ್ಜಿತ ವಿಶಾಲವಾದ ಕಾಂಕ್ರೀಟ್ ರಸ್ತೆ ಮತ್ತು ಕಾಂಕ್ರೀಟ್ ಚರಂಡಿಗಳನ್ನು ಹೊಂದಿರುತ್ತದೆ.

ಸಿ ಬ್ಲಾಕ್‌ನಲ್ಲಿ ಡಬ್ಲ್ಯೂ.ಐ.ಎಫ್. ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಮಾರ್ಚ-2022ರ ಅಂತ್ಯಕ್ಕೆ ಪೂರ್ಣಗೊಳ್ಳಲಿವೆ.

ಡಿ ಬ್ಲಾಕ್‌ನಲ್ಲಿ ಪೇಟೆಕಾರ್ಯಕರ್ತರಿಗೆ ಹಾಗೂ ಸಾರ್ವಜನಿಕರಿಗೆ ದೈನಂದಿನ ಚಟುವಟಿಕೆಗಳಿಗೆ ಅಗತ್ಯವಿರುವ ಸೌಲಭ್ಯಗಳಾದ ಆಡಳಿತ ಕಛೇರಿ, ಬ್ಯಾಂಕ್ ಕಟ್ಟಡಗಳು, ಅಂಚೆ ಕಛೇರಿ, ಪೋಲೀಸ್ ಸ್ಟೇಶನ್ , ರೈತಭವನ ಇತ್ಯಾದಿ ಸೌಕರ್ಯಗಳನ್ನು ಒದಗಿಸಲಾಗಿದೆ.

ಇ-ಬ್ಲಾಕ್‌ನಲ್ಲಿ ತರಕಾರಿ ಮಾರುಕಟ್ಟೆಗಾಗಿ 210 ಅಂಗಡಿ-ವ-ಮಳಿಗೆಗಳು, 07 ಮುಚ್ಚು ಹರಾಜು ಕಟ್ಟೆಗಳು, 07 ಸಣ್ಣ ಅಂಗಡಿ-ವ-ಮಳಿಗೆಗಳು ಹಾಗೂ ಇತರೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು, ಈಗಾಗಲೇ ತರಕಾರಿ ಸಗಟು ವ್ಯಾಪಾರ ವಹಿವಾಟು ನಡೆಯುತ್ತಿರುತ್ತದೆ.

ಸಮಿತಿಯಿಂದ ಈರುಳ್ಳಿ/ಆಲೂಗಡ್ಡೆ/ಬೆಳ್ಳುಳ್ಳಿ ವ್ಯಾಪಾರ ವಹಿವಾಟಿಗೆ ಪರವಾನಗಿ ಪಡೆದಿರುವ ಪೇಟೆ ಕಾರ್ಯಕರ್ತರಲ್ಲಿ ಶೇ.50 ರಷ್ಟು ಪೇಟೆ ಕಾರ್ಯಕರ್ತರಿಗೆ ದಾಸನಪುರ ಉಪ

ಮಾರುಕಟ್ಟೆ ಪ್ರಾಂಗಣದ ಎ ಮತ್ತು ಬಿ ಬ್ಲಾಕ್‌ನಲ್ಲಿ ಅಂಗಡಿ-ವ-ಗೋದಾಮು ಹಾಗೂ ಮುಚ್ಚು ಹರಾಜುಕಟ್ಟೆಯಲ್ಲಿ ಹಂಚಿಕೆ ಮಾಡಲಾಗಿದ್ದು, ಉಳಿದ ಶೇ.50 ರಷ್ಟು ಪೇಟೆ ಕಾರ್ಯಕರ್ತರಿಗೆ ಸ್ಥಳಾವಕಾಶ ಒದಗಿಸಬೇಕಾಗಿದೆ. ಪ್ರಸ್ತುತ ಸಿ-ಬ್ಲಾಕ್‌ನಲ್ಲಿ 168 ಅಂಗಡಿ-ವ-ಮಳಿಗೆಗಳು, 12 ಹರಾಜುಕಟ್ಟೆಗಳು ಹಾಗೂ ಎ & ಬಿ ಬ್ಲಾಕ್‌ನಲ್ಲಿ ಹೆಚ್ಚುವರಿಯಾಗಿ 98 ಮಳಿಗೆಗಳನ್ನು ನಿರ್ಮಿಸಲಾಗುತ್ತಿದ್ದು, ಪೂರ್ಣಗೊಂಡ ನಂತರ ಉಳಿದ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲಾಗುವುದು.

2018-19ನೇ ಸಾಲಿನಲ್ಲಿ ಒತ್ತಾಯಪೂರ್ವಕವಾಗಿ ಎಲ್ಲಾ ಈರುಳ್ಳಿ-ಆಲೂಗಡ್ಡೆ ವರ್ತಕರನ್ನು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ಕೈಗೊಳ್ಳಲು ಸ್ಥಳಾಂತರಿಸಲಾಗಿರುತ್ತದೆ. ನಂತರ ಕೋವಿಡ್-19ರ ಹಿನ್ನೆಲೆಯಲ್ಲಿ, "ದಾಸನಪುರ ಉಪಮಾರುಕಟ್ಟೆಯಲ್ಲಿ ಲೈಸನ್ಸ್ ಹೊಂದಿ ಮಳಿಗೆ ಹೊಂದಿರುವವರು ಮತ್ತು ಮಳಿಗೆ ಇಲ್ಲದಿದ್ದಾಗ್ಯೂ ಲೈಸನ್ಸ್ ಹೊಂದಿದ್ದು ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ, ಶುಂಠಿ ವ್ಯವಹಾರ ಮಾಡಲು ಇಚ್ಛಿಸುವವರು ವಾರದಲ್ಲಿ ಆರು ದಿನ ಹಾಗೂ ಯಶವಂತಪುರ ಪ್ರಾಂಗಣದಲ್ಲಿ ಲೈಸನ್ಸ್ ಹಾಗೂ ಮಳಿಗೆ ಹೊಂದಿರುವವರು ವಾರದಲ್ಲಿ ಮೂರು ದಿನ ಆಯಾ ಪ್ರಾಂಗಣಗಳಲ್ಲಿಯೇ ವ್ಯವಹರಿಸಲು ದಿನಾಂಕ:30.06.2020ರವರೆಗೆ ತಾತ್ಕಾಲಿಕವಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

ತದನಂತರದಲ್ಲಿ ಕೋವಿಡ್-19ರ 2ನೇ ಅಲೆಯ ಹಿನ್ನೆಲೆಯಲ್ಲಿ, ಸಾಮಾಜಿಕ ಅಂತರ ಕಾಪಾಡುವ ದೃಷ್ಟಿಯಿಂದ ಈರುಳ್ಳಿ, ಆಲೂಗಡ್ಡೆ ಮತ್ತು ಬೆಳ್ಳುಳ್ಳಿ ವ್ಯಾಪಾರ ವಹಿವಾಟನ್ನು ಪೂರ್ಣ ಪ್ರಮಾಣದಲ್ಲಿ ದಾಸನಪುರ ಉಪಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಿಸಲಾಗಿರುತ್ತದೆ.

ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ದಾಸನಪುರ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಶುಂಠಿ ಮತ್ತು ಆಲೂಗಡ್ಡೆ ವ್ಯವಹಾರಗಳು ನಡೆದಿದ್ದು, ಕಳೆದ 03 ವರ್ಷಗಳಲ್ಲಿ ವಸೂಲಾದ ಬಳಕೆದಾರರ ಶುಲ್ಕದ ವಿವರ ಕೆಳಕಂಡಂತಿದೆ.

| **ವರ್ಷ** | **ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ) ಬಳಕೆದಾರರ ಶುಲ್ಕದ ಮೊತ್ತ (ರೂ.ಕೋಟಿಗಳಲ್ಲಿ)** | **(ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣ ಬಳಕೆದಾರರ ಶುಲ್ಕದ ಮೊತ್ತ (ರೂ.ಕೋಟಿಗಳಲ್ಲಿ)** |
|---|---|---|
| 2019-20 | 19.77 | 1.11 |
| 2020-21 | 6.57 | 2.00 |
| 2021-22 (ಜನವರಿ–2022 ರವರೆಗೆ | 3.97 | 3.36 |

ದಾಸನಪುರ ಉಪ ಮಾರುಕಟ್ಟೆಯಲ್ಲಿ ಎ, ಬಿ ಮತ್ತು ಸಿ ಬ್ಲಾಕ್‌ನಲ್ಲಿ ನಿರ್ಮಿಸಲಾಗುತ್ತಿರುವ ಅಂಗಡಿ-ವ-ಮಳಿಗೆಗಳ ಕಾಮಗಾರಿಯು ಪ್ರಗತಿಯಲ್ಲಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ಉಳಿದ ಅರ್ಹ ಈರುಳ್ಳಿ, ಆಲೂಗಡ್ಡೆ ವರ್ತಕರುಗಳಿಗೆ ಅಂಗಡಿ/ಮಳಿಗೆಗಳನ್ನು ಹಂಚಿಕೆ ಮಾಡಿ ವ್ಯಾಪಾರ ವಹಿವಾಟನ್ನು ಪೂರ್ಣ ಪ್ರಮಾಣದಲ್ಲಿ ಸ್ಥಳಾಂತರಿಸಲು ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದು.

ಸಂಖ್ಯೆ: ಸಿಒ 74 ಎಂಆರ್‌ಇ 2022

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು.